ದಿ: **01-07-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ** ಪಾಟೀ **ಸವಾಲು : ಪ್ರತಿವಾದಿ ಪರ ವಕೀಲರಾದ ಶ್ರೀ ಕೆ. ಶ್ರೀನಿವಾಸ ಐತಾಳ್ ರವರಿಂದ**

ನಾನು ನಿ.ಪಿ - 2, 8 ಮತ್ತು 9ರ ಪ್ರಕಾರ ಹಾಜರು ಮಾಡಿರುವ ಪಹಣಿ ಪತ್ರಿಕೆಯಲ್ಲಿ ವಾದಿಗೆ ವಿಲುನಾಮೆಯ ಮೂಲಕ ಬಂದಿದೆ ಎಂದು ನಮೂದಿದೆ ಎಂದರೆ ಸರಿಯಲ್ಲ. ನಿ.ಪಿ - 7ರ ಪ್ರಕಾರ ಹಾಜರು ಮಾಡಿರುವ ವ್ಯವಸ್ಥಾ ಪತ್ರದ ಪ್ರಕಾರ ದಾವಾ ಆಸ್ತಿಯ ಖಾತೆ ವಾದಿಯ ಹೆಸರಿಗೆ ಬದಲಾವಣೆ ಆಗಿಲ್ಲ ಎಂದರೆ ಸರಿಯಲ್ಲ. ನಿ.ಪಿ - 7 ಜಾರಿಗೆ ಬರತಕ್ಕ ದಾಖಲೆ ಅಲ್ಲ ಮತ್ತು ಜಾರಿಗೆ ಬಂದಿಲ್ಲ ಎಂದರೆ ಸರಿಯಲ್ಲ. ನಿ.ಪಿ - 7 ಪ್ರತಿವಾದಿಯ ಪೂರ್ವಾಧಿಕಾರಿಗಳಿಗೆ ಬಂಧನಕಾರಿಯಲ್ಲ ಎಂದರೆ ಸರಿಯಲ್ಲ. ನಿ.ಪಿ-3 ರಿಂದ 5ರ ದಾಖಲೆಗಳನ್ನು ಪಡೆಯಲು ಯಾರು ಅರ್ಜಿ ಸಲ್ಲಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ನಿ.ಪಿ-3 ರಿಂದ 5ರ ದಾಖಲೆಗಳನ್ನು ಪಡೆಯಲು ಯಾವಾಗ ಅರ್ಜಿ ಸಲ್ಲಿಸಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಯಾವುದೇ ಕಾಲದಲ್ಲಿ ವಾದಿಯ ಹಕ್ಕಿನ ಮತ್ತು ಸ್ವಾಧೀನದ ಆಸ್ತಿಯಾಗಿರಲಿಲ್ಲ ಎಂದರೆ ಸರಿಯಲ್ಲ.

**2)** ಪ್ರಶ್ನೆ **:** ದಿನಾಂಕ 20-01-2024ರಂದು ದಾವಾ ಆಸ್ತಿಗೆ ಸಂಬಂಧಿಸಿದಂತೆ ಏನಾಯಿತು?

ಉತ್ತರ : ಸದರಿ ದಿನದಂದು ನಾವು ವಕೀಲರ ಮುಖಾಂತರ ದಾವೆ ಸಲ್ಲಿಸಿರುತ್ತೇವೆ.

**3)** ವಾದಿಯು ನನ್ನ ಪರವಾಗಿ ಮುಕ್ತಿಯಾರು ಪತ್ರವನ್ನು 2024ನೇ ಸಾಲಿನಲ್ಲಿ ನೀಡಿರುತ್ತಾನೆ, ಆದರೆ ನನಗೆ ದಿನಾಂಕ ಮತ್ತು ತಿಂಗಳು ನೆನಪಿಲ್ಲ.

(ಸಾಕ್ಷಿಯು ಪಾಟೀ ಸವಾಲಿನಲ್ಲಿ ಕೇಳುವ ಪ್ರಶ್ನಗಳಿಗೆ ಸರಿಯಾದ ಮತ್ತು ಸಮಂಜಸ ಉತ್ತರಗಳನ್ನು ನೀಡದೇ ಇರುವುದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು. )

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**